# ವೈರಾಗ್ಯ



D ಬ್ರಾಹ್ಮಭಕ್ತ : ವೈರಾಗ್ಯ ಹೇಗೆ ಉಂಟಾಗುತ್ತದೆ? ಎಲ್ಲರಿಗೂ ಅದು ಏಕೆ ಬರುವುದಿಲ್ಲ?

ಶ್ರೀರಾಮಕೃಷ್ಣರು: ಭೋಗತೃಪ್ತಿ ಪೂರ್ಣವಾಗದ ಹೊರತು ವೈರಾಗ್ಯ ಉಂಟಾಗುವುದಿಲ್ಲ. ಮಗುವಿಗೆ ತಿಂಡಿ ಕೊಟ್ಟೋ ಅಥವಾ ಆಟದ ಸಾಮಾನು ಕೊಟ್ಟೋ ಸುಲಭವಾಗಿ ಸಮಾಧಾನಗೊಳಿಸಬಹುದು. ಆದರೆ ಅದು ತಿಂಡಿಯನ್ನು ತಿಂದು ಮುಗಿಸಿದ ನಂತರ ಅಥವಾ ಆಟದ ಸಾಮಾನಿನೊಡನೆ ಆಟವಾಡಿ ಮುಗಿಸಿದ ನಂತರ ಅಳಲಾರಂಭಿಸುತ್ತದೆ, 'ನಾನು ತಾಯಿಯ ಹತ್ತಿರ ಹೋಗಬೇಕು' ಎಂಬುದಾಗಿ. ತಾಯಿಯ ಹತ್ತಿರಕ್ಕೆ ಕರೆದುಕೊಂಡು ಹೋಗಲಿಲ್ಲ ಎಂದರೆ ಕೋಪದಿಂದ ಆಟದ ಸಾಮಾನುಗಳನ್ನು 'ರೊಯ್ಞ್' ಅಂತ ಬಿಸಾಡಿ ತಾರಸ್ವರದಿಂದ ಕಿರಿಚಲಾರಂಭಿಸುತ್ತದೆ.

D ಭಗವಂತ ಐಶ್ವರ್ಯಕ್ಕೆ ವಶನೆ? ಆತ ಭಕ್ತಿಗೆ ವಶನಾಗುತ್ತಾನೆ. ಆತನಿಗೆ ಏನು ಬೇಕಾಗಿದೆ? ನಿವಾಗಿಯೂ ಹಣವಲ್ಲ! ಭಕ್ತರ ಭಾವ, ಪ್ರೇಮ, ಭಕ್ತಿ, ವಿವೇಕ, ವೈರಾಗ್ಯ ಇವೇ ಮೊದಲಾದವು ಬೇಕು.

D ಒಮ್ಮೆ ರಾಮಚಂದ್ರನಿಗೆ ತೀವ್ರವೈರಾಗ್ಯ ಬಂದುಬಿಟ್ಟಿತು. ಅದನ್ನು ನೋಡಿ ದಶರಥ ಬಹಳ ಚಿಂತಿತನಾಗಿ ವಸಿಷ್ಠನನ್ನು ಸಮೀಪಿಸಿ ರಾಮ ಸಂಸಾರವನ್ನು ತ್ಯಾಗಮಾಡದ ಹಾಗೆ ಬುದ್ಧಿವಾದವೀಯಬೇಕೆಂದು ಬೇಡಿಕೊಂಡ. ವಸಿಷ್ಠ ರಾಮನ ಹತ್ತಿರಕ್ಕೆ ಬಂದು ನೋಡುತ್ತಾನೆ, ಆತ ವಿಮನಸ್ಕನಾಗಿ ಕುಳಿತಿದ್ದಾನೆ. ಅಂತರ್ಯದಲ್ಲಿ ತೀವ್ರ ವೈರಾಗ್ಯ ತುಂಬಿ ತುಳುಕಾಡುತ್ತಿದೆ. ವಸಿಷ್ಠ ಆತನಿಗೆ ಹೇಳಿದ: 'ನೀನು ಸಂಸಾರವನ್ನು ಏಕೆ ತ್ಯಾಗ ಮಾಡಬೇಕು? ಸಂಸಾರ ಆತನಿಂದ ಹೊರಗಿದೆಯೇನು? ನನ್ನೊಡನೆ ವಿಚಾರ ಮಾಡಿ ನೋಡು.' ರಾಮನ ಅನುಭವಕ್ಕೆ ಬಂತು, ಈ ಜಗತ್ತು ಪರಬ್ರಹ್ಮನಿಂದಲೇ ಉದ್ಭವವಾಗಿದೆ ಎಂದು. ಅದಕ್ಕಾಗಿ ಆತ ಸುಮ್ಮನೆ ಆಗಿಬಿಟ್ಟ.

D ತೀವ್ರವೈರಾಗ್ಯ ಉಂಟಾದರೆ, ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬಹುದು. ಯಾರಿಗೆ ವೈರಾಗ್ಯ ಉಂಟಾಗಿದೆಯೊ, ಅವರಿಗೆ ಈ ಸಂಸಾರ ದಾವಾನಲದ ಹಾಗೆ ಕಾಣುತ್ತದೆ. ಹೆಂಡತಿ, ಮಕ್ಕಳು ಅವರ ಕಣ್ಣಿಗೆ ಆಳವಾದ ಬಾವಿಯ ಹಾಗೆ ಕಾಣುತ್ತಾರೆ. ಅಂಥ ವೈರಾಗ್ಯ ನಿಜವಾಗಿ ಉಂಟಾದುದೇ ಆದರೆ, ಮನೆಯನ್ನು ತ್ಯಜಿಸಿ ಹೋಗಲೇಬೇಕಾಗುತ್ತದೆ. ಸಂಸಾರದಲ್ಲಿ ಕೇವಲ ಅನಾಸಕ್ತರಾಗಿ ಇದ್ದುಕೊಂಡಿರುವುದು ಅವರಿಗೆ ತೃಪ್ತಿಯನ್ನು ತರದು.

D ಸಚ್ಚಿದಾನಂದನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳದೆ ಇತ್ತು ಎಂದರೆ, ಜೀವನ ಬರಿದೆ ವ್ಯರ್ಥ. ವಿವೇಕ ವೈರಾಗ್ಯಗಳಂಥ ವಸ್ತು ಇನ್ನು ಬೇರೆ ಯಾವುದೂ ಇಲ್ಲ. ಸಂಸಾರಿಗಳ ಅನುರಾಗ ಬಹಳ ಕ್ಷಣಿಕ – ಕಾದ ಬಾಣಲೆಯ ಮೇಲೆ ಬಿದ್ದ ನೀರಿನ ಹನಿಯ ಹಾಗೆ. ಒಂದು ಹೂವನ್ನು ನೋಡಿ ಬಹುಶಃ ಆತ ಹೇಳಬಹುದು: 'ಆಹ, ಭಗವಂತನ ಸೃಷ್ಟಿ ಎಷ್ಟು ಅದ್ಭುತವಾದದ್ದು!'

D ಸಂಸಾರಿಗಳ ಮನಸ್ಸು ಬಗ್ಗಡದ ನೀರಾಗಿಬಿಟ್ಟಿರುವುದೇನೋ ನಿಜ. ಆದರೆ ಅದಕ್ಕೆ ಶುದ್ಧೀಕರಣ ವಸ್ತು ಹಾಕಿದರೆ ಮತ್ತೆ ಶುದ್ಧ ಆಗಬಹುದು. ವಿವೇಕ ವೈರಾಗ್ಯಗಳೇ ಶುದ್ಧೀಕರಣ ವಸ್ತು.

D ವೈರಾಗ್ಯದಲ್ಲಿ ಎರಡು ವಿಧ – ತೀವ್ರ, ಮಂದ. ಮಂದವೈರಾಗ್ಯ – ಆಗುತ್ತಾ ಇದೆ, ಆಗುತ್ತೆ ಅನ್ನುವ ಹಾಗೆ; ಬಹಳ ನಿಧಾನವಾದ ತಾಳ. ತೀವ್ರ ವೈರಾಗ್ಯ – ಸಾಣೆ ಹಿಡಿಸಿದ ಕತ್ತಿಯ ಅಲಗಿನ ಹಾಗೆ; ಮಾಯಾಪಾಶವನ್ನು 'ಕಚ್, ಕಚ್' ಅಂತ ಕತ್ತರಿಸಿಬಿಡುತ್ತದೆ.

D ಒಬ್ಬನ ಹೆಂಡತಿ ತನ್ನ ಪತಿಗೆ ಹೇಳಿದಳು: 'ನೋಡಿ, ಆ ಮನೆಯವರಿಗೆ ದೊಡ್ಡ ವೈರಾಗ್ಯ ಬಂದುಬಿಟ್ಟಿದೆ – ಆದರೆ ನಿಮ್ಮಲ್ಲಿ ಅಂಥದೇನೂ ಎಳ್ಳಷ್ಟೂ ಕಾಣುತ್ತಿಲ್ಲ. ಅವರಿಗೆ ಹದಿನಾರು ಜನ ಹೆಂಡತಿಯರಿದ್ದಾರೆ. ಒಬ್ಬೊಬ್ಬಳನ್ನಾಗಿ ತ್ಯಾಗ ಮಾಡುತ್ತಿದ್ದಾರೆ.' ಆಗ ಆಕೆಯ ಪತಿ ಸ್ನಾನಕ್ಕೆ ಹೊರಟಿದ್ದ. ಹೆಗಲ ಮೇಲೆ ಚೌಕ ಇತ್ತು. ಹೇಳಿದ: 'ಎಲೇ ಹುಚ್ಚಿ! ಆತನಿಗೆ ತ್ಯಾಗ ಮಾಡಲು ಸಾಧ್ಯವಾಗುವುದಿಲ್ಲ. ತ್ಯಾಗದಲ್ಲಿ ಕಿಂಚಿತ್ ಎಂಬುದುಂಟೆ? ನನ್ನ ಕೈಯಲ್ಲಿ ಸಾಧ್ಯ. ಇಗೋ ನೋಡು! ಹೊರಟೆ ನಾನು.' ಆತ ಮನೆಯ ವ್ಯವಸ್ಥೆಯ ಸಂಬಂಧವಾಗಿ ಸ್ವಲ್ಪವೂ ಯೋಚಿಸದೆ, ಅದೇ ಅವಸ್ಥೆಯಲ್ಲಿ, ಎಂದರೆ ಮೇಲೆ ಚೌಕ ಹಾಕಿಕೊಂಡಿದ್ದ ಹಾಗೇ ಮನೆ ಬಿಟ್ಟು ಹೊರಟೇಹೋದ. ಇದಕ್ಕೆ ತೀವ್ರವೈರಾಗ್ಯ ಅಂತ ಹೆಸರು.

D ಭಗವಂತನ ಸಾಕ್ಷಾತ್ಕಾರವನ್ನು ಅಭಾವಮುಖ ಅಂದರೆ 'ನೇತಿ, ನೇತಿ', ಭಾವಮುಖ ಅಂದರೆ 'ಇತಿ, ಇತಿ' ಈ ಎರಡೂ ಮಾರ್ಗಗಳಿಂದಲೂ ಪಡೆಯಬಹುದು. ಮೊದಲನೆಯದು ವಿವೇಕ ವೈರಾಗ್ಯಗಳಿಂದ ಕೂಡಿದ ಭಾವಸೂಚಕ ಮಾರ್ಗ.

D ಒಬ್ಬ ರೈತ ಬಹಳ ದಿನಗಳಿಂದ ಕೆಲಸ ಮಾಡುತ್ತಿದ್ದಾನೆ. ಆದರೆ ಕೆರೆಯ ನೀರು ಮಾತ್ರ ಇನ್ನೂ ಆತನ ಗದ್ದೆಗೆ ಬಂದಿಲ್ಲ. ಆತನ ಮನಸ್ಸಿನಲ್ಲಿ ಪೌರುಷವಿಲ್ಲ ಇನ್ನೊಬ್ಬ ಒಂದು ನಾಲ್ಕೈದು ದಿನ ಕೆಲಸ ಮಾಡಿದ ನಂತರ – 'ಇಂದು ಗದ್ದೆಗೆ ನೀರು ತಂದ ಮೇಲೇನೇ ಕೆಲಸ ನಿಲ್ಲಿಸುವುದು' ಎಂದು ಪ್ರತಿಜ್ಞೆ ಮಾಡಿಕೊಳ್ಳುತ್ತಾನೆ. ಸ್ನಾನ, ಊಟ ಇವುಗಳ ಭಾವನೆಯನ್ನೇ ಒಂದು ಮೂಲೆಗೆ ಕಟ್ಟಿಟ್ಟುಬಿಡುತ್ತಾನೆ. ಇಡೀ ದಿನವೆಲ್ಲಾ ಕೆಲಸ ಮಾಡುತ್ತಾನೆ. ಸಾಯಂಕಾಲದ ಹೊತ್ತಿಗೆ ಯಾವಾಗ ನೀರು ಆತನ ಗದ್ದೆಗೆ 'ಕಲ ಕಲ' ಅಂತ ಬರಲಾರಂಭಿಸುತ್ತದೋ ಆಗ ಆತನಿಗೆ ಬಹಳ ಆನಂದವಾಗಿಬಿಡುತ್ತದೆ. ಅನಂತರ ಮನೆಗೆ ಹಿಂದಿರುಗಿ ಹೆಂಡತಿಗೆ ಹೇಳುತ್ತಾನೆ, 'ಕೊಡು ಈಗ ಎಣ್ಣೆಯನ್ನು. ಸ್ನಾನ ಮಾಡುತ್ತೇನೆ.' ಸ್ನಾನ ಮುಗಿಸಿ, ಊಟ ಮಾಡಿ, ನಿಶ್ಚಿಂತನಾಗಿ ನಿದ್ರಿಸಲಾರಂಭಿಸುತ್ತಾನೆ.

**'ಶ್ರೀರಾಮಕೃಷ್ಣ ವಚನವೇದ'**ದಿಂದ

ಭಾಗ ೧

# ಸ್ವಾಮಿ ಪ್ರೇಮಾನಂದರು

**ಸ್ವಾಮಿ ಅಶೋಕಾನಂದ**

ಅನುವಾದ: ಡಾ. ಇ. ವಸಂತಕುಮಾರ್

ಶ್ರೀರಾಮಕೃಷ್ಣರಿಂದ 'ಈಶ್ವರಕೋಟಿ'ಗಳೆಂದು ಕರೆಯಲ್ಪಟ್ಟ ಅವರ ಕೆಲವೇ ಮಂದಿ ಅಂತರಂಗ ಶಿಷ್ಯರಲ್ಲಿ ಒಬ್ಬರಾಗಿದ್ದರು ಸ್ವಾಮಿ ಪ್ರೇಮಾನಂದರು (೧೮೬೧-೧೯೧೮). ರಾಮಕೃಷ್ಣ ಮಹಾಸಂಘ ಆರಂಭಗೊಂಡ ದಿನಗಳಲ್ಲಿ ಯುವಪೀಳಿಗೆಯ ಸಾಧು, ಬ್ರಹ್ಮಚಾರಿಗಳ ಸ್ಫೂರ್ತಿಯ ಕೇಂದ್ರವಾಗಿದ್ದ ಅವರು, ಬೇಲೂರು ಮಠದ ಮ್ಯಾನೇಜರ್ ಆಗಿ ಅತಿ ಮಹತ್ವದ ಕಾರ್ಯ ನಿರ್ವಹಿಸಿದ್ದರು. ಆಧ್ಯಾತ್ಮಿಕ ವಿಷಯಗಳಲ್ಲಿ ಅವರು ಎಷ್ಟು ಕಟ್ಟುನಿಟ್ಟಾಗಿದ್ದರೋ ಅಷ್ಟೇ ಪ್ರೇಮಮಯರೂ ಆಗಿದ್ದರು. ಅವರೊಂದಿಗೆ ಅತ್ಯಂತ ನಿಕಟ ಸಂಪರ್ಕ ಹೊಂದಿದ್ದು, ಅವರ ಅಸೀಮ ಕೃಪೆಗೆ ಪಾತ್ರರಾಗಿದ್ದ ಸ್ವಾಮಿ ಅಶೋಕಾನಂದರು ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋದ ವೇದಾಂತ ಸೊಸೈಟಿಯ ಮುಖ್ಯಸ್ಥರಾಗಿದ್ದರು. ಪಶ್ಚಿಮದಲ್ಲಿ ಶ್ರೀರಾಮಕೃಷ್ಣ - ವಿವೇಕಾನಂದ ಭಾವಧಾರೆ ಹರಡಲು ಅವರು ವಹಿಸಿದ ಪಾತ್ರ ಪ್ರಮುಖವಾದುದು. ಪ್ರೇಮಾನಂದರನ್ನು ಕುರಿತು ಅವರು ರಚಿಸಿರುವ ಈ ಹೃದಯಂಗಮವಾದ ಸ್ಮೃತಿಚಿತ್ರವನ್ನು ಕನ್ನಡಕ್ಕೆ ಸರಳ, ಸುಂದರವಾಗಿ ತಂದ ಅನುವಾದಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು. ಅವರು ಉತ್ತಮ ಲೇಖಕರೂ ವಾಗ್ಮಿಗಳೂ ಆಗಿದ್ದಾರೆ; ಅವರ ಅನೇಕ ಲೇಖನಗಳು '**ವಿವೇಕಪ್ರಭ**'ದಲ್ಲಿ ಪ್ರಕಟವಾಗಿವೆ.



– ೧ –

**ಅ**ವತಾರಪುರುಷರಾದ ಶ್ರೀರಾಮಕೃಷ್ಣರ ಒಂದು ವಿಶೇಷವೆಂದರೆ, ಅವರು ಅದ್ಭುತ ಆಧ್ಯಾತ್ಮಿಕ ವ್ಯಕ್ತಿಗಳನ್ನು ತಮ್ಮೊಡನೆ ಕರೆತಂದರು. ಅನಂತರ ಅವರು ಶ್ರೀರಾಮಕೃಷ್ಣರ ಶಿಷ್ಯರಾದರು. ಅವರಲ್ಲೊಬ್ಬರು ಸ್ವಾಮಿ ಪ್ರೇಮಾನಂದರು. ಅವರನ್ನು ಕಂಡು, ಅವರೊಂದಿಗೆ ಒಂದು ಸಂಬಂಧವನ್ನು ಪಡೆಯುವ ಮಹಾಭಾಗ್ಯ ನನ್ನದಾಗಿತ್ತು. ಅವರ ಬಳಿ ನಾನು ಅನೇಕ ಬಾರಿ ಹೋಗಿದ್ದೆ ಮತ್ತು ಅವರ ಆಶೀರ್ವಾದವನ್ನು ಅನೇಕ ಬಾರಿ ಪಡೆದಿದ್ದೆ. ಅವರು ನನ್ನ ಮೇಲೆ ಅನಂತ ಕೃಪೆ ತೋರಿದರು. ನಾನು ಅವರಿಗೆ ವಿಶೇಷವಾಗಿ ಋಣಿಯಾಗಿರುವೆನೆಂದು ಹೇಳಿದರೆ ತಪ್ಪಾಗಲಾರದು.

ಅವರು ಒಬ್ಬ ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದರು. ಹೆಸರಿಗೆ ತಕ್ಕಂತೆ ಅವರು ಪ್ರೇಮಸ್ವರೂಪರಾಗಿದ್ದರು. ಅವರಲ್ಲಿ ಆಧ್ಯಾತ್ಮಿಕ ಆನಂದ ಅವ್ಯಾಹತವಾಗಿ ಹರಿಯುತ್ತಿತ್ತು. ಶ್ರೀರಾಮಕೃಷ್ಣರ ಶಿಷ್ಯರಲ್ಲೆಲ್ಲ ಸ್ವಾಭಾವಿಕವಾಗಿ ದಿವ್ಯಪ್ರೇಮ ಮತ್ತು ದಿವ್ಯ ಆನಂದ ಮುಂತಾದ ಆಧ್ಯಾತ್ಮಿಕ ಗುಣಗಳೆಲ್ಲ ವ್ಯಕ್ತವಾಗಿದ್ದವು. ಆದರೆ ಸ್ವಾಮಿ ಪ್ರೇಮಾನಂದರಲ್ಲಿ ದಿವ್ಯಪ್ರೇಮ ವಿಶೇಷವಾಗಿ ವ್ಯಕ್ತವಾಗಿತ್ತು. ಅವರು ಪ್ರೇಮ ಮತ್ತು ಪರಿಶುದ್ಧತೆ ಮೂರ್ತಿವೆತ್ತಂತಿದ್ದರು. ಶ್ರೀರಾಮಕೃಷ್ಣರು ತಮ್ಮ ಬಳಿಗೆ ಬಂದವರಲ್ಲೆಲ್ಲ ಪ್ರೇಮಾನಂದರನ್ನು ಅತ್ಯಂತ ಪರಿಶುದ್ಧಾತ್ಮರು ಎಂದು ಹೇಳುತ್ತಿದ್ದರು.

ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಅನೇಕ ವಿಧಗಳಲ್ಲಿ ವರ್ಗೀಕರಿಸುತ್ತಿದ್ದರು; ಕೆಲವರನ್ನು ಈಶ್ವರಕೋಟಿಗಳೆಂದು ಕರೆಯುತ್ತಿದ್ದರು, ಉಳಿದವರನ್ನು ಜೀವಕೋಟಿಗಳೆಂದು ಕರೆಯುತ್ತಿದ್ದರು. ಜೀವಕೋಟಿಗಳೆಂದರೆ, ಯಾರು ತಮ್ಮ ಮುಕ್ತಿಯನ್ನು ಬಯಸುವರೊ ಅವರು. ಮುಕ್ತಿ ಪಡೆದರೆಂದರೆ ಅವರ ಜೀವನ ಅಲ್ಲಿಗೆ ಕೊನೆಯಾಗುವುದು. ಆದರೆ ಕೆಲವರಿರುವರು. ಅವರು ಮುಕ್ತರಾಗಿದ್ದರೂ, ದೇವರಲ್ಲದೆ ಬೇರೇನೂ ಅವರಿಗೆ ಬೇಕಾಗಿಲ್ಲದಿದ್ದರೂ, ಸದಾ ಭಗವದಾನಂದವನ್ನು ಸವಿಯುತ್ತಿದ್ದರೂ, ಅವರ ಹೃದಯ ಇತರರ ಕಷ್ಟಕ್ಕೆ ಮಿಡಿಯುವುದು, ಇತರರ ಮುಕ್ತಿಗೆ ಅವರು ಶ್ರಮಿಸುವರು. ಅವರೇ ಈಶ್ವರಕೋಟಿಗಳು. ಶ್ರೀರಾಮಕೃಷ್ಣರೆಡೆಗೆ ಬಂದ ಅನೇಕ ಶಿಷ್ಯರಲ್ಲಿ ಆರು ಜನರನ್ನು ಮಾತ್ರ ಈಶ್ವರಕೋಟಿಗಳೆಂದು ಅವರು ಹೇಳುತ್ತಿದ್ದರು. ಅವರೇ ಸ್ವಾಮಿ ವಿವೇಕಾನಂದರು, ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಪ್ರೇಮಾನಂದರು, ಸ್ವಾಮಿ ಯೋಗಾನಂದರು, ಸ್ವಾಮಿ ನಿರಂಜನಾನಂದರು, ಮತ್ತು ಗೃಹಸ್ಥ ಭಕ್ತರಾದ ಪೂರ್ಣಚಂದ್ರಘೋಷ್ ಎಂಬುವರು.

ಸ್ವಾಮಿ ಪ್ರೇಮಾನಂದರು ಅನೇಕ ರೀತಿಯಲ್ಲಿ ಅಸಾಧಾರಣ ವ್ಯಕ್ತಿಯಾಗಿದ್ದರು. ಅವರ ರೂಪವೂ ವಿಶೇಷವಾಗಿತ್ತು. ಅವರು ಬಾಣದಂತೆ ನೇರವಾಗಿದ್ದರು, ಎತ್ತರವಾಗಿ ತೆಳ್ಳಗಿದ್ದರು. ತಲೆಗೂದಲು ಕಡುಗಪ್ಪಾಗಿತ್ತು. ಮೈಬಣ್ಣ ಅಪರಂಜಿಯಂತಿತ್ತು. ಅವರು ಭಾವದಲ್ಲಿ ಲೀನರಾದಾಗ ಅವರ ಮುಖ ಹೊಂಬಣ್ಣಕ್ಕೆ

ತಿರುಗುತ್ತಿತ್ತು. ಅಂತಹ ಸ್ಥಿತಿಯಲ್ಲಿ ಅವರನ್ನು  ನಾನು ಅನೇಕ ವೇಳೆ ನೋಡಿದ್ದೇನೆ.

ಸ್ವಾಮಿ ಪ್ರೇಮಾನಂದರ ಪೂರ್ವಾಶ್ರಮದ ಹೆಸರು, ಬಾಬುರಾಮ ಘೋಷ್. ಅವರು ಹುಟ್ಟಿದುದು ೧೮೬೧ರ  ಡಿಸೆಂಬರ್ ೧೦ರಂದು. ಕಲ್ಕತ್ತೆಯಿಂದ ಸುಮಾರು ೩೦ ಮೈಲಿ ದೂರದಲ್ಲಿರುವ ಆಂಟ್‌ಪುರವೆಂಬ, ಗಂಗಾನದಿಗೆ ಸಮೀಪದಲ್ಲಿರುವ ಹಳ್ಳಿಯಲ್ಲಿ ಅವರ ಜನನವಾಯಿತು. ಅವರ ತಂದೆ ಮತ್ತು ತಾಯಿ ಶ್ರೀಮಂತ ಮನೆತನಕ್ಕೆ ಸೇರಿದವರು.  ಸ್ವಾಮಿಗಳ ಬಾಲ್ಯಕಾಲದ ವಿವರಗಳು ಅಷ್ಟಾಗಿ ತಿಳಿದಿಲ್ಲ; ಎರಡು ಘಟನೆಗಳು ಪ್ರಚಲಿತವಾಗಿವೆ. ಅವರು ಕೇವಲ ನಾಲ್ಕೈದು ವರ್ಷಗಳ ಬಾಲಕನಾಗಿದ್ದಾಗಲೆ ಯಾರಾದರೂ ಮದುವೆಯ ವಿಷಯವನ್ನು ಪ್ರಸ್ತಾಪಿಸಿದರೆ ಅವರಿಗೆ ಸಹಿಸಲಾಗುತ್ತಿರಲಿಲ್ಲ. ‘‘ದಯವಿಟ್ಟು ಅದರ ವಿಷಯ ಮಾತನಾಡಬೇಡಿ, ನನ್ನನ್ನು ಮದುವೆಯಾಗುವಂತೆ ಮಾಡಬೇಡಿ! ಹಾಗೆ ಮಾಡಿದರೆ ನಾನು ಸಾಯುವೆ’’ ಎಂದು ಅಳುತ್ತಿದ್ದರು. ಮತ್ತೊಂದು ಸಂಗತಿಯೆಂದರೆ, ಅವರು ಎಂಟು ವರ್ಷದವರಾಗಿದ್ದಾಗ, ತಾವು ಗಂಗಾನದಿಯ ದಡದಲ್ಲಿ ಒಂದು ಸುಂದರವಾದ ವನಪ್ರದೇಶದಲ್ಲಿ ಮತ್ತೊಬ್ಬ ಸಂನ್ಯಾಸಿಯೊಂದಿಗೆ ದೇವರ ಧ್ಯಾನ ಮಾಡುತ್ತಿರುವಂತೆ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದರಂತೆ.

ಭಗವದ್ಭಕ್ತಿ ಅವರ ವಂಶದ ಗುಣವೆಂದು ತೋರುವುದು. ಅವರ ತಂದೆ ಮತ್ತು ತಾಯಿಯ ಕಡೆ ಅನೇಕ ಭಕ್ತರು ಇದ್ದರು.  ಅಲ್ಲದೆ, ಅವರ ಸಹೋದರಿ ವಿವಾಹವಾಗಿದ್ದುದು ಒಬ್ಬ ದೊಡ್ಡ ಭಗವದ್ಭಕ್ತರೊಂದಿಗೆ. ಅವರ ಹೆಸರು ಬಲರಾಮ ಬೋಸ್. ವಾಸ್ತವವಾಗಿ ಇವರೇ ಮುಂದೆ ತನ್ನ ಮನೆಯವರೆಲ್ಲರನ್ನೂ ಮತ್ತು ಸ್ವಾಮಿ ಪ್ರೇಮಾನಂದರ ತಾಯಿಯಾದ ತನ್ನ ಅತ್ತೆಯನ್ನೂ ಶ್ರೀರಾಮಕೃಷ್ಣರ ಬಳಿಗೆ ಕರೆದೊಯ್ದವರು.  ಸ್ವಾಮಿ ಪ್ರೇಮಾನಂದರೂ ಕೂಡ ಶ್ರೀರಾಮಕೃಷ್ಣರ ಬಗ್ಗೆ ಇವರಿಂದಲೇ ಕೇಳಿರಬೇಕು. ಆದರೂ ಅವರು ಶ್ರೀರಾಮಕೃಷ್ಣರನ್ನು ಮೊದಲು ನೋಡಲು ಹೋದುದು ಸ್ವಾಮಿ ಬ್ರಹ್ಮಾನಂದರೊಡನೆ. ಆಗ ಬ್ರಹ್ಮಾನಂದರನ್ನು ‘ರಾಖಾಲ್’ ಎಂದು ಕರೆಯುತ್ತಿದ್ದರು. ಇಬ್ಬರು ಯುವಕರೂ ಒಂದೇ ಪ್ರೌಢಶಾಲೆಯಲ್ಲಿ ಓದುತ್ತಿದ್ದು, ಅನ್ಯೋನ್ಯ ಸ್ನೇಹಿತರಾಗಿದ್ದರು. ರಾಖಾಲ ಆಗಾಗ ಶ್ರೀರಾಮಕೃಷ್ಣರನ್ನು ನೋಡಲು ದಕ್ಷಿಣೇಶ್ವರಕ್ಕೆ ಹೋಗುತ್ತಿದ್ದುದು ಬಾಬುರಾಮನಿಗೆ ಗೊತ್ತಿತ್ತು. ಒಂದು ದಿನ ತನ್ನನ್ನೂ ಕರೆದುಕೊಂಡು ಹೋಗುವಂತೆ  ಅವನು ರಾಖಾಲನಿಗೆ ಹೇಳಿದನು. ಅವರಿಬ್ಬರೂ ಒಂದು ಶನಿವಾರ ಮಧ್ಯಾಹ್ನ ಗಂಗಾನದಿಯ ದಡದಲ್ಲಿ ಭೇಟಿಯಾದರು. ಅವರಿಬ್ಬರಿಗೂ ಪರಿಚಯವಿದ್ದ ರಾಮದಯಾಲ ಎಂಬ ಶ್ರೀರಾಮಕೃಷ್ಣರ ಭಕ್ತನ ಜೊತೆ ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಹೋದರು. ಆಗ ೧೮೮೨ರ ಶರತ್ಕಾಲ. ಅವರು ದಕ್ಷಿಣೇಶ್ವರವನ್ನು ಸೇರುವ ಹೊತ್ತಿಗೆ ಕತ್ತಲಾಗಿತ್ತು; ಶ್ರೀರಾಮಕೃಷ್ಣರ ಕೋಣೆಗೆ ಹೋದಾಗ ಅವರು ಅಲ್ಲಿರಲಿಲ್ಲ.  ಆದರೆ ರಾಖಾಲನಿಗೆ ಗೊತ್ತಿತ್ತು, ಅವರನ್ನು ಎಲ್ಲಿ ಹುಡುಕಬೇಕೆಂಬುದು. ಅವನು ಕಾಳೀಮಂದಿರಕ್ಕೆ ಹೋಗಿ ಸ್ವಲ್ಪ ಹೊತ್ತಿನಲ್ಲಿ ಶ್ರೀರಾಮಕೃಷ್ಣರೊಡನೆ ಹಿಂತಿರುಗಿದನು. ಅವನು ಶ್ರೀರಾಮಕೃಷ್ಣರ ತೋಳನ್ನು ಹಿಡಿದುಕೊಂಡು, ‘‘ಇಲ್ಲಿ ಮೆಟ್ಟಿಲಿದೆ, ಇಲ್ಲಿ ಇಳಿಯಬೇಕು, ಇಲ್ಲಿ ಹತ್ತಬೇಕು’’ ಎಂದು ಹೇಳುತ್ತ ಅವರ ಕೋಣೆಗೆ ಕರೆತಂದನು.

ಶ್ರೀರಾಮಕೃಷ್ಣರು ಒಂದು ಮಂಚದಮೇಲೆ ಕುಳಿತುಕೊಂಡರು. ಭಗವದ್ಭಾವದಲ್ಲಿ ಮತ್ತರಾಗಿದ್ದ ಅವರು ಈಗ ಪ್ರಕೃತಿಸ್ಥರಾದರು. ಅವರು ಬಾಬುರಾಮನೊಂದಿಗೆ ಮಾತನಾಡಿ ಅವನನ್ನು ಅತ್ಯಂತ ಆದರದಿಂದ ಸ್ವಾಗತಿಸಿದರು. ಅವರ ಕೋಣೆಯಲ್ಲಿ ಒಂದು ದೀಪ ಮಂದವಾಗಿ ಉರಿಯುತ್ತಿತ್ತು. ದೀಪದ ಹತ್ತಿರ, ‘‘ಬಾ, ನಿನ್ನನ್ನು ನೋಡಬೇಕು’’ ಎಂದು ಬಾಬುರಾಮನಿಗೆ ಹೇಳಿ, ಅವನ ಕೈಗಳು, ಕಾಲು, ಮುಖ ಎಲ್ಲವನ್ನೂ ಕೂಲಂಕಷವಾಗಿ ಪರೀಕ್ಷಿಸಿ ತೃಪ್ತಿ ವ್ಯಕ್ತಪಡಿಸಿದರು. ಅವನ ಕೈಗಳನ್ನು ತಮ್ಮ ಕೈಗಳಿಂದ ತೂಗಿ ನೋಡಿ ಸಂತೋಷದಿಂದ, ‘‘ಬಹಳ ಒಳ್ಳೆಯದು, ಬಹಳ ಒಳ್ಳೆಯದು’’ ಎಂದು ಹೇಳಿದರು.

ಬಾಬುರಾಮ ಅಲ್ಲಿ ಕಳೆದ ರಾತ್ರಿ ವಿಚಿತ್ರವಾಗಿತ್ತು.  ಶ್ರೀರಾಮಕೃಷ್ಣರು ಬಾಬುರಾಮನಿಗೆ ತಮ್ಮ ಕೊಠಡಿಯಲ್ಲೆ, ರಾಖಾಲನೊಂದಿಗೆ ಮಲಗಲು ಹೇಳಿದರು. ಆದರೆ ಬಾಬುರಾಮ ಹೊರಗಡೆ ಮಲಗುವುದಾಗಿ ಹೇಳಿದನು.  ತನ್ನ ಜತೆ ಬಂದಿದ್ದ ಸ್ನೇಹಿತನೊಂದಿಗೆ ವರಾಂಡದಲ್ಲಿಮಲಗಿದನು. ನಿದ್ರೆ ಹತ್ತುವಷ್ಟರಲ್ಲಿ ಶ್ರೀರಾಮಕೃಷ್ಣರು ಹೊರಗೆ ಬಂದು ವಯಸ್ಸಾಗಿದ್ದವನೊಂದಿಗೆ ಮಾತನಾಡಲು ಪ್ರಾರಂಭಿಸಿದರು. ‘‘ರಾಮದಯಾಲ, ನಿದ್ರಿಸುತ್ತಿರುವೆಯಾ?’’ ಎಂದು ಕೇಳಿದರು. ಸಹಜವಾಗಿ ಇಬ್ಬರೂ ಎದ್ದುಕುಳಿತು, ‘‘ಇಲ್ಲ ಸ್ವಾಮಿ, ಇಲ್ಲ’’ ಎಂದರು. ‘‘ನೋಡು, ನರೇನ್ ಬಹಳ ದಿನಗಳಿಂದ ಇಲ್ಲಿಗೆ ಬಂದಿಲ್ಲ, ಅವನಿಗೆ ಹೇಳುವೆಯಾ? ಅವನನ್ನು ಕಾಣದೆ ನನ್ನ ಹೃದಯ ಹಿಂಡಿದಂತಾಗುತ್ತಿದೆ’’ ಎಂದು ಹೇಳುತ್ತ ತಮ್ಮ ಕೈಯಲ್ಲಿದ್ದ ಚೌಕವನ್ನು ತಿರುಚಿ ತೋರಿಸಿ, ‘‘ಹೀಗೆ ನನ್ನ ಹೃದಯ ಹಿಂಡುತ್ತಿದೆ. ನೀನು ಅವನಿಗೆ ಹೇಳು. ಅವನು ಬಾರದಿದ್ದರೆ ನನಗೆ ಎಷ್ಟು ಹಿಂಸೆಯಾಗುತ್ತದೆ ಎನ್ನುವುದು ಅವನಿಗೆ ಅರ್ಥವಾಗುವುದಿಲ್ಲ. ದಯವಿಟ್ಟು ಅವನಿಗೆ ಹೇಳುವೆಯಾ?’’ ಎಂದರು. ‘‘ಆಗಲಿ, ಸ್ವಾಮಿ, ನಾನು ನಾಳೆ ಬೆಳಗ್ಗೆ ಕಲ್ಕತ್ತೆಗೆ ಹಿಂತಿರುಗಿದ ಕೂಡಲೆ ಅವನಿಗೆ ತಿಳಿಸುತ್ತೇನೆ’’ ಎಂದು ರಾಮದಯಾಲ ಹೇಳಿದ ನಂತರ ಶ್ರೀರಾಮಕೃಷ್ಣರು ತಮ್ಮ ಕೊಠಡಿಗೆ ಹಿಂತಿರುಗಿದರು. ಆದರೆ ಸ್ವಲ್ಪ ಹೊತ್ತಿನಲ್ಲೆ ಅವರು ಮತ್ತೆ ಬಂದರು, ನರೇಂದ್ರನಿಗೆ ಹೇಳುವಂತೆ ರಾಮದಯಾಲನಿಗೆ ಮತ್ತೊಮ್ಮೆ ಹೇಳಿದರು. ರಾತ್ರಿಯೆಲ್ಲ ಅವರು ಹೀಗೆ ಬಂದುಹೋಗುತ್ತಿದ್ದರು. ಮತ್ತೆ ಮತ್ತೆ ರಾಮದಯಾಲನನ್ನು ಎಬ್ಬಿಸಿ, ‘‘ಮಲಗಿರುವೆಯಾ? ನೀನು ಹೋಗಿ ನರೇಂದ್ರನಿಗೆ ಹೇಳಬೇಕು. ನಾನು ಹೇಗೆ ಕಷ್ಟಪಡುತ್ತಿರುವೆ? ಮರೆಯಬೇಡ. ಅವನಿಗೆ ಹೇಳುವೆಯಾ? ಅವನಿಗೆ ವಿವರಿಸುವೆಯಾ?’’ ಎಂದು ರಾತ್ರಿಯೆಲ್ಲ ಹೇಳುತ್ತಿದ್ದರು. ಸಹಜವಾಗಿ ಬಾಬುರಾಮನಿಗೆ ನಿದ್ರಿಸಲಾಗಲಿಲ್ಲ. ಅವನು ಈ ನಾಟಕ ನಡೆಯುವುದನ್ನು ನೋಡುತ್ತಿದ್ದನು. ಶ್ರೀರಾಮಕೃಷ್ಣರು ಇಷ್ಟೊಂದು ಹಂಬಲಿಸುತ್ತಿರುವ ಮತ್ತು ಅವರಿಗೆ ಇಷ್ಟೊಂದು ಕಷ್ಟ ಕೊಡುತ್ತಿರುವ ನರೇಂದ್ರನೆಂಬ ಈ